ಶ್ರೀ ಎಚ್. ಎನ್. ನಂಜೇಗೌಡ (ಭಾರಿ ನೀರಾವರಿ ರಾಜ್ಯ ಮಂತ್ರಿಗಳು.)—

(*a*) This Project is still under Investigation.

(*b*) This does not arise in view of reply to clause (*a*).

FIRE ACCIDENT IN SHITIKEND VILLAGE

166. Sri B. G. BANAKAR (Hirekerur).—

Will the Minister for Revenue be pleased to state :—

(*a*) the number of huts belonging to Voddar Community in Shitikend village in Hirekerur Taluk at Dharwar District burnt during the first quarter of the year 1972;

(*b*) the total amount of relief granted by the Government to the victims of fire accident;

(*c*) whether the Department of Social Welfare has made any arrangements for construction of houses to these Voddar people;

(*d*) if no, Government grant is given so far, the reasons for delay;

(*e*) the relief and help that Government would like to propose to these victims ?

Sri N. HUTCHAMASTHY GOWDA (Minister for Revenue).—

(*a*) 17.

(*b*) Rs. 920.

(*c*) No.

(*d*) Does not arise in view of reply to Clause (*b*).

(*e*) Does not arise in view of reply to Clause (*b*).

ದೇವಗಿರಿಯಲ್ಲಿ ಕೊಳಾಯಿ ಯೋಜನೆ.

178. ಶ್ರೀ ಎಫ್. ಎಸ್. ತಾವರೆ (ಹಾವೇರಿ).—

ಸಮಾಜವಿಕಾಸ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳ ಈ ವಿಷಯವನ್ನು ದಯೆಯಿಟ್ಟು ತಿಳಿಸುವರೆ :—

(ಅ) ಧಾರವಾಡ ಜಿಲ್ಲೆ ಹಾವೇರಿ ತಾಲ್ಲೂಕ್ ದೇವಗಿರಿಯಲ್ಲಿ ಪ್ರಾರಂಭವಾಗಿರತಕ್ಕ ಕೊಳಾಯಿ ಯೋಜನೆ ಯಾವ ಹಂತದಲ್ಲಿದೆ;

(ಆ) ಇಷ್ಟು ಮುಂದಗತಿಯಿಂದ ಈ ಕೆಲಸ ಸಾಗಲು ತೊಂದರೆಗಳೇನು;

(ಇ) ಪ್ರತಿ ವರ್ಷ ನೀರಿನ ಅಭಾವದಿಂದ ಒಬ್ಬಿಬ್ಬರು ಸಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಇಂಥ ಪರಿಸ್ಥಿತಿ ಇರುವಾಗಲೂ ಸಹ ಸರ್ಕಾರವು ಈ ಕಾರ್ಯ ಪೂರ್ತಿಯಾದೆ ಇರಲು ಕಾರಣಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ (ಸಮಾಜ ವಿಕಾಸ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು).—

(ಅ) ವರದಾ ಹೊಳೆಯಿಂದ ಜಕ್ಕಣಿ ಭಾವಿಗೆ ಬರುವ 12 ಅಂಗುಲ ವ್ಯಾಸದ ಕನೆಕ್ಟಿಂಗ್ ಪೈಪು 13 ಮೈಲುಗಳಾಗಿದೆ; ಜಕ್ಕಣಿಯ ಭಾವಿಯ ಕೆಲಸ ಅರ್ಧ ಭಾಗದಷ್ಟು ಮುಗಿದಿದೆ; ಪಂಪಿಂಗ್ ಮೆಷಿನ ಸಲುವಾಗಿ ಅಗಿಯುವ ಕೆಲಸವು ಮುಗಿಯುತ್ತಾ ಬಂದಿದೆ; ಪೈಪುಗಳನ್ನು ಹಾಕುವ ಮತ್ತು ಜೋಡಿಸುವ ಕೆಲಸವು ಇಲಾಖೆಯ ಮುಖಾಂತರವೇ ನಡೆಯುತ್ತಿದೆ; ಜಲಸಂಗ್ರಹಾಲಯ ಕಟ್ಟಡದ ಕೆಲಸ ಮುಗಿದಿದೆ; ಸಿಮೆಂಟ್ ಕಾಂಕ್ರೀಟ್ ಮಾಳಿಗೆ ಹಾಕುವುದಕ್ಕೆ ಸಂಬಂಧಿಸಿದಂತೆ ತಯಾರಾಗಿದೆ.

(ಆ) ಈ ಯೋಜನೆಯ ಕೆಲಸವನ್ನು ತೆಗೆದುಕೊಂಡಿದ್ದ ಕಂಟ್ರಾಕ್ಟರು ಕೆಲವು ತೊಂದರೆಗಳಿಂದ ಈ ಕೆಲಸದ ಸ್ವಲ್ಪ ಭಾಗದಷ್ಟು ಮಾತ್ರ ಮಾಡಿ ತರತಪ್ಪಿಸಿಕೊಂಡರು; ಆದ್ದರಿಂದ ದಿನಾಂಕ 13-5-72 ರಂದು ಕಂಟ್ರಾಕ್ಟರು ಎಷ್ಟು ಕೆಲಸ ಮಾಡಿದ್ದರೆ ಅಷ್ಟಕ್ಕೆ ಅಳತೆಗಳನ್ನು ತೆಗೆದುಕೊಂಡು ಇನ್ನುಳಿದ ಕೆಲಸವನ್ನು ಇಲಾಖೆಯ ಮುಖಾಂತರವೇ ಮಾಡಿಸಲಾಗುತ್ತಿದೆ; ಆದ್ದರಿಂದ ಈ ಕೆಲಸವನ್ನು ಬೇಗನೆ ಪೂರೈಸಲು ಸಾಧ್ಯವಾಗಲಿಲ್ಲ.

(ಇ) ಇಲ್ಲ.

(ಈ) ಮೇಲೆ ವಿವರಿಸಿದ ಕಾರಣಗಳಿಂದ ಈ ಕೆಲಸವನ್ನು ಇಲ್ಲಿಯವರಿಗೂ ಪೂರೈಸಲು ಸಾಧ್ಯವಾಗಲಿಲ್ಲ; ಈಗ ಉಳಿದಿರುವ ಕೆಲಸವನ್ನು ಇಲಾಖೆಯ ಮುಖಾಂತರವೇ ಮಾಡಿಸುತ್ತಿರುವುದರಿಂದ ಈ ಕೆಲಸವನ್ನು ಈ ವರ್ಷದೊಳಗೆ ಮುಗಿಸುವ ನಿರೀಕ್ಷೆ ಇದೆ;

ವರಾಹಿ ನದಿ ಯೋಜನೆ

179. ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—

ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯವನ್ನು ದಯೆಯಿಟ್ಟು ತಿಳಿಸುವರೆ:—

(ಅ) ತೀರ್ಥಹಳ್ಳಿ ಕ್ಷೇತ್ರದ ನಗರ ಹೋಬಳಿಯ ವರಾಹಿ ನದಿ ಯೋಜನೆಯನ್ನು ಸರ್ಕಾರ ಕೈಕೊಳ್ಳುವುದೇ;

(ಆ) ಈ ಬಗ್ಗೆ ತಜ್ಞರು ಹಿಂದೆ ನಡೆಸಿದ ಪರಿಶೀಲನೆಯ ಫಲತಾಂಶವೇನು?

Sri H. M. CHANNABASAPPA (Minister for Public Works and Electricity).—

(*a*) The Varahi Hydro-Electric Project will be undertaken by Mysore Power Corporation after it is cleared by the Central Government and subject to availability of funds.

(*b*) The Project report based on the investigation conducted has been sent to Government of India for clearance.

COMMON LAW FOR MUNICIPAL CORPORATIONS

Sri B. G. Banakar (Hirekerur).—

Will the Minister for Municipal Administration be pleased to state:—

(*a*) whether the State Government intends to have a common Municipal Corporation Law for all the Municipal Corporations of Bangalore, Mysore and Hubli-Dharwar;